https://www.kuvempuonline.com



# ಅಂಚೆ ಮತ್ತು ತೆರಪಿನ ಶಿಕ್ಷಣ
# ತೃತೀಯ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್ / ಸೆಪ್ಟೆಂಬರ್ 2009
## ಕನ್ನಡ ಐಚ್ಛಿಕ ಪತ್ರಿಕೆ ಯು.ಕೆ. - ೫
## (ಹಳಗನ್ನಡ ವ್ಯಾಕರಣ ಮತ್ತು ಕನ್ನಡ ಭಾಷೆಯ ಚರಿತ್ರೆ)

ಸಮಯ : 3 ಗಂಟೆಗಳು

ಅಂಕಗಳು : 70 ಅಂಕಗಳು

## 'ಅ' ವಿಭಾಗ
## (ಹಳಗನ್ನಡ ವ್ಯಾಕರಣ)

1. ಕೆಳಗಿನ ಒಂದು ಸೂತ್ರಕ್ಕೆ ವ್ಯಾಖ್ಯಾನ ಬರೆಯಿರಿ. **06**

೧) ಏಕದ್ವಿತ್ವ ಬಹುತ್ವಮ
ನೇಕದ್ವಿ ಬಹುತ್ವ ವಸ್ತುಗಳ್ಗಾಚರಿಪರ್
ಸ್ವೀಕಾರಂ ಕನ್ನಡದೊಳ
ಗೇಕ ಬಹುತ್ವಂ ದ್ವಿವಚನಮುಚಿತದೆ ಬರ್ಕುಂ ॥

೨) ಎರಡುಂ ರೇಫೆಗಳಂ ತಂ
ದುರವಣೆಯಿಂ ಕೂಡಿದಂತೆ ವೋಲ್ ಶ್ರುತಿ ಕಷ್ಟಂ
ಬರೆ ಸಂಧಿ ಮಾಡಲಾಗದು
ಕರಡೆಯ ಗಿರ್ಗಟದ ದನಿವೊಲಮರವೆಂದುಂ ॥

2. ಕೆಳಗಿನ ಸೂತ್ರ ಭಾಗಗಳಲ್ಲಿ ಎರಡಕ್ಕೆ ಉದಾಹರಣೆಯೊಂದಿಗೆ ವಿವರಿಸಿ. **06**

೧) ಕಹಳೆಯ ಪಾಂಗಿನವೊಲ್ ಶಬ್ದ ದ್ರವ್ಯಂ ಜನಿಯಿಸುಗುಂ

೨) ಪರಿಭಾವಿಸೆ ಯೋಗ ವಾಹಮವುನಾಲ್ಕೆವಲಂ

೩) ಅಸಹ್ಯವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ

೪) ನಾಮರೂಢಿಯಯುಯದಪಕ್ಷಂ

3. ಕೆಳಗಿನ ಎರಡರ ವ್ಯಾಕರಣ ವಿಶೇಷಗಳನ್ನು ಬರೆಯಿರಿ. **06**

೧) ತಿಳಿಗೊಳದಿಂದೆ ಪಾಱುದುವು ಹಂಸಕುಳಂ

೨) ಅಮರಾಂಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ

೩) ಅಯ್ಯೋ ಅಕ್ಕಟಾ ಇಂದ್ರಂಗೆಕೇಡಾಯ್ತೆ

೪) ಪೊನ್ನುಳ್ಳವನೆಕುಲೀನಂ

4. ಎರಡಕ್ಕೆ ಟಿಪ್ಪಣಿ ಬರೆಯಿರಿ. **04**

ಮಹಾಪ್ರಾಣಾಕ್ಷರಗಳು, ಶ್ರಾವಣ-ಚಾಕ್ಷುಷ, ನಾಮಿ, ಪ್ಲುತ



https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com



5. ಎರಡು ಪ್ರಶ್ನೆಗಳಿಗೆ ಉತ್ತರಿಸಿ. 9 x 2=18

೧) 'ನಾಲ್ವತ್ತೇೞಾಯ್ತುಳೆ ಶುದ್ಧಗೆಯಬ್ಬಗನ್ನಡಕ್ಕೀಕ್ರಮದಿಂ' - ಕೇಶಿರಾಜನ ಈ ಹೇಳಿಕೆಯನ್ನು ಚರ್ಚಿಸಿ.

೨) 'ಲಿಂಗಮೊಂಬತ್ತು ತೆಱಂ' ಕೇಶಿರಾಜನ ಲಿಂಗವಿವಕ್ಷೆಯ ಔಚಿತ್ಯವನ್ನು ವಿವರಿಸಿ.

೩) ಸಂಧಿ ಎಂದರೇನು? ಲೋಪ-ಆಗಮ ಸಂಧಿಗಳನ್ನು ಕುರಿತು ಬರೆಯಿರಿ.

೪) ಸಮಾಸ ಎಂದರೇನು? ಬಹುವ್ರೀಹಿ, ದ್ವಂದ್ವ, ಅಂಶಿಸಮಾಸಗಳನ್ನು ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.

## 'ಆ' ವಿಭಾಗ

## (ಕನ್ನಡ ಭಾಷೆಯ ಚರಿತ್ರೆ)

6. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 8 + 8=16

೧) ಭಾಷೆ ಎಂದರೇನು? ಉಗಮ-ವಿಕಾಸ ಮತ್ತು ಲಕ್ಷಣಗಳನ್ನು ವಿಶ್ಲೇಷಿಸಿ.

೨) ಕನ್ನಡ ಶಬ್ದದ ವ್ಯುತ್ಪತ್ತಿ, ನಾಡುನುಡಿಗಳ ಪ್ರಾಚೀನತೆ ತಿಳಿಸಿರಿ.

೩) ಪ್ರಾಂತಭೇದ ಎಂದರೇನು? ಪ್ರಾಂತಭೇದಗಳುಂಟಾಗಲು ಕಾರಣಗಳಾವುವು? ಚರ್ಚಿಸಿ.

7. ಎರಡನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ. 4 + 4=8

೧) ಕ್ರಿಯಾಪದ

೨) ಅವ್ಯಯಗಳು

೩) ಸರ್ವನಾಮಗಳು

8. ಮೂರಕ್ಕೆ ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ. 6

೧) ಎಳ್ಳೆಣ್ಣೆ

೨) ಕಬ್ಬಿಣ

೩) ಉಡುಗೊರೆ

೪) ಆಕಳು

೫) ಗುಂಡುಸೂಜಿ

* * *



https://www.kuvempuonline.com

https://www.kuvempuonline.com

https://www.kuvempuonline.com